## ಶ್ರೀಮಾತೆಯವರೊಡನೆ ಮಾತುಕತೆ



### ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

### ರಥಯಾತ್ರೆಯ ದಿನ

ರಥಯಾತ್ರೆಯಾದ್ದರಿಂದ ಇಂದು ಇಲ್ಲಿಯೂ (ಶ್ರೀಮಾತೆಯವರ ಮನೆ) ರಥದ ಆಯೋಜನೆ ಆಗುತ್ತಿದೆ. ಭೂದೇವ ಅದನ್ನು ಮಾಡುತ್ತಿದ್ದಾನೆ. ರಥದಲ್ಲಿ ಶ್ರೀರಾಮಕೃಷ್ಣರ ಪಟವನ್ನು ತೆಗೆದುಕೊಂಡು ಹೋಗಲಾಗುತ್ತಿದೆ. ಆಶ್ರಮದ ಕಾರ್ಯದಿಂದಾಗಿ ಗೌರೀ ಮಾ ಬೇಗನೆ ಹೊರಟುಹೋದಳು. ನಾನೇ ಮೆಟ್ಟಲಿನ ತನಕ ಹೋಗಿ ಬಿಟ್ಟು ಬಂದೆ.

ಮಾತಿನ ಮಧ್ಯೆ ಗೌರೀ ಮಾ ಮಾತು ಬಂತು. ಶ್ರೀಮಾತೆ ಹೇಳಿದರು: "ಆಕೆ ಆಶ್ರಮದ ಹುಡುಗಿಯರ ಸೇವೆ ಮಾಡುತ್ತಾಳೆ. ಜ್ವರಗಿರ ಏನಾದರೂ ಬಂದರೆ, ಎಲ್ಲ ರೀತಿಯ ಸೇವೆಯನ್ನೂ ತಾನೇ ಮಾಡುತ್ತಾಳೆ. ತನ್ನ ಸಂಸಾರದಲ್ಲಿ ಇವನ್ನೆಲ್ಲ ಮಾಡಲು ಅವಳಿಗೆ ಅವಕಾಶ ಸಿಗಲಿಲ್ಲ. ಶ್ರೀರಾಮಕೃಷ್ಣರು ಈಗ ಎಲ್ಲವನ್ನೂ ಅವಳ ಮೂಲಕ ಮಾಡಿಸುತ್ತಿದ್ದಾರೆ. ಏಕೆಂದರೆ ಇದು ಅವಳ ಕಡೆಯ ಜನ್ಮ."

ಶ್ರೀರಾಮಕೃಷ್ಣರನ್ನು ರಥಾರೋಹಣ ಮಾಡಿಸಲಾಯಿತು. ಶ್ರೀಮಾತೆಯವರು ಆನಂದದಿಂದ ತಾವು ಕುಳಿತಿರುವ ಸ್ಥಳದಿಂದಲೇ ಈ ದೃಶ್ಯವನ್ನು ಏಕಾಗ್ರದೃಷ್ಟಿಯಿಂದ ನೋಡುತ್ತಿದ್ದಾರೆ. ರಥವನ್ನು ಈಗ ಕೆಳಗೆ ತೆಗೆದುಕೊಂಡು ಹೋಗಲಾಯಿತು. ಗಂಗಾ ನದಿಯ ದಡದಲ್ಲಿರುವ ರಸ್ತೆಯಲ್ಲಿ ರಥವನ್ನು ಭಕ್ತರೆಲ್ಲಾ ಸೇರಿ ಎಳೆದು, ಸಂಜೆಯ ನಂತರ ಮತ್ತೆ ವಾಪಸ್ಸು ತಂದರು. ರಥವನ್ನು ಮಹಡಿಗೆ ತಂದ ಮೇಲೆ ಸ್ತ್ರೀಭಕ್ತರೆಲ್ಲಾ ಸೇರಿ ಎಳೆದರು. ನಾವೂ ಅಂದರೆ, ನಳಿನಿ ದೀದಿ, ಶ್ರೀಮಾತೆ, ರಾಧು ಮತ್ತು ನಾನು ರಥವನ್ನು ಎಳೆದೆವು. ಶ್ರೀಮಾತೆಯವರು ನಗುನಗುತ್ತಾ ರಥದ ಕುರಿತು ಮಾತನಾಡಲು ತೊಡಗಿದರು.

ರಸ್ತೆಯಲ್ಲಿ ಎಲ್ಲರೂ ಸೇರಿ ರಥವನ್ನು ಎಳೆಯುವುದನ್ನು ಕಂಡು, "ಎಲ್ಲರೂ ಜಗನ್ನಾಥ ರಥದ ದರ್ಶನ ಮಾಡುವುದು ಅಸಾಧ್ಯ. ಇಲ್ಲಿ ಯಾರು (ಶ್ರೀರಾಮಕೃಷ್ಣರ) ದರ್ಶನ ಮಾಡುತ್ತಾರೋ ಅವರಿಗೂ ಸಹ (ಭಗವಂತನ ಸಾಕ್ಷಾತ್ಕಾರ) ಆಗುತ್ತದೆ." ಭಕ್ತರು ಒಬ್ಬೊಬ್ಬರಾಗಿ ಹೊರಟರು. ರಾತ್ರಿ ನೈವೇದ್ಯದ ನಂತರ, ಶ್ರೀಮಾತೆಯವರು ಒಂದು ತಟ್ಟೆಯಲ್ಲಿ ಪ್ರಸಾದವನ್ನು ತಂದು ನನಗೆ ಕೊಟ್ಟರು. ರಾತ್ರಿ ಮನೆಗೆ ಬರುವ ಹೊತ್ತಿಗೆ ೧೧.೩೦ ಗಂಟೆ ಆಗಿತ್ತು.

### ೧೮-೯-೧೯೧೨

ಗೌರೀ ಮಾ ಆಶ್ರಮದ ಶಾಲೆಯಲ್ಲಿ ಬಹಳ ಕೆಲಸವಿತ್ತು. ಆದ್ದರಿಂದ ಆ ದಿನಗಳಲ್ಲಿ ಶ್ರೀಮಾತೆಯವರ ಬಳಿಗೆ ಹೋಗಲು ಸಾಧ್ಯವಾಗಲಿಲ್ಲ. ಇಂದು ರಾಧಾಷ್ಟಮಿ. ಶಾಲೆಗೆ ರಜೆ. ಆದ್ದರಿಂದ ಮುಂಜಾನೆಯೇ ನಾನು ಶ್ರೀಮಾತೆಯವರ ಬಳಿಗೆ ಹೋದೆ. ಆಗ ಶ್ರೀಮಾತೆಯವರು ಗಂಗಾಸ್ನಾನಕ್ಕಾಗಿ ಅಣಿಯಾಗುತ್ತಿದ್ದರು. ನನ್ನನ್ನು ನೋಡಿ, "ಬಂದೆಯಾ, ಬಾಮ್ಮಾ, ಬೆಳಗ್ಗೆಯೇ ಬಂದು ಒಳ್ಳೆಯದನ್ನೇ ಮಾಡಿದೆ. ಇಂದು ರಾಧಾಷ್ಟಮಿ. ಒಳ್ಳೆಯ ದಿನ. ಸ್ವಲ್ಪ ಕುಳಿತುಕೋ. ಸ್ನಾನ ಮಾಡಿ ಬರುತ್ತೇನೆ" ಎಂದರು. ನಾನೂ ಅವರ ಜೊತೆಗೆ ಗಂಗೆಗೆ ಹೋಗುತ್ತೇನೆ ಎಂದು ಇಚ್ಛೆ ವ್ಯಕ್ತಪಡಿಸಿದೆ. "ಸರಿ, ಹಾಗಾದರೆ, ಬಾ" ಎಂದರು. ತುಂತುರು ತುಂತುರಾಗಿ ಮಳೆ ಹನಿಯಲು ಆರಂಭಿಸಿತು. ಆದ್ದರಿಂದ ಗೋಲಾಪ್ ಮಾ ಖಡಾಖಂಡಿತವಾಗಿ ಗಂಗೆಯ ಹತ್ತಿರ ಹೋಗದಿರಲು ನನಗೆ ಹೇಳಿದರು. ಹೀಗಾಗಿ ನನ್ನ ಇಚ್ಛೆ ನೆರವೇರಲಿಲ್ಲ. ಶ್ರೀಮಾತೆಯವರು ಎಂದೂ ತಮ್ಮ ಮಾತಿನಿಂದ ಇತರರ ಮಾತನ್ನು ತಳ್ಳಿ ಹಾಕುತ್ತಿರಲಿಲ್ಲ. ಈ ರೀತಿ ಆಗಿದ್ದನ್ನು ಅನೇಕ ಬಾರಿ ಕಂಡಿದ್ದೇನೆ. ಯಾವಾಗಲೂ ಅವರು ಸರಳಸ್ವಭಾವದ ನವವಧುವಿನಂತೆ ತಗ್ಗಿಬಗ್ಗಿ ನಡೆಯುತ್ತಿದ್ದರು.

ಶ್ರೀಮಾತೆಯವರು ರಸ್ತೆಗೆ ಇಳಿಯುತ್ತಲೇ ಮಳೆ ನಿಂತಿತು. ಸ್ನಾನ ಮಾಡಿಕೊಂಡು ಬಂದ ಮೇಲೆ ಅವರು ನನಗೆ ಹೇಳಿದರು, "ಹೊರಟ ತಕ್ಷಣ ಮಳೆ ನಿಂತಿತು. ಆಹಾ! ನೀನು ಬರುತ್ತೀಯಾ ಎಂದುಕೊಂಡೆ. ಬಂದಿದ್ದರೆ, ನೀನೂ ಗಂಗಾದರ್ಶನ ಮಾಡಬಹುದಿತ್ತು." ನಿಜ ಹೇಳಬೇಕೆಂದರೆ, ಗಂಗೆಯ ದರ್ಶನಕ್ಕಿಂತಲೂ ಶ್ರೀಮಾತೆಯವರ ಸಾನ್ನಿಧ್ಯವೇ ನನಗೆ ಬೇಕಾಗಿತ್ತು, ಅದೇ ಮುಖ್ಯವಾಗಿತ್ತು. ಸಂಸಾರ ಬಂಧನದಿಂದ ಬಿಡಿಸಿಕೊಂಡು, ಶ್ರೀಮಾತೆಯವರ ಬಳಿಗೆ ಬರುವುದೇ ಅಪರೂಪ. ಬಂದ ದಿನವಾದರೂ ಶ್ರೀಮಾತೆಯವರನ್ನು ಒಂದು ಕ್ಷಣವೂ ಬಿಟ್ಟಿರಲು ಮನಸ್ಸು ಒಪ್ಪುವುದೇ ಇಲ್ಲ. ಗೋಲಾಪ್ ಮಾ ಶ್ರೀಮಾತೆಯವರ ಮಾತನ್ನು ಕೇಳಿ ಹೇಳಿದಳು: "(ಗಂಗಾದರ್ಶನ ಮಾಡದಿದ್ದರೆ) ಏನಂತೆ? ನಿನ್ನ ಪಾದಸ್ಪರ್ಶ ಮಾಡಿದರೆ ಸಾಕು. ಎಲ್ಲಾ ಫಲ ದೊರಕುತ್ತದೆ." ನಾನೂ ಈ ಮಾತನ್ನು ಅನುಮೋದಿಸಿದೆ. ಶ್ರೀಮಾತೆಯವರು, "ಆಹಾ! ಇದೇನು ಮಾತು! ಗಂಗೆ ಗಂಗೆಯೇ" ಎಂದರು.

ಶ್ರೀಮಾತೆಯವರು ಯಾವಾಗಲೂ ತಮ್ಮ ನಿಜರೂಪವನ್ನು ಮರೆಮಾಚಿಕೊಂಡು, ಜನಸಾಮಾನ್ಯರಂತೆ ಇರುತ್ತಿದ್ದರು. ಮಾತುಕತೆ, ಆಚಾರ, ವ್ಯವಹಾರಗಳಲ್ಲಿ ಅವರ ಮಾಹಾತ್ಮ್ಯೆಯನ್ನು ಯಾರಿಗೂ ಕಂಡುಹಿಡಿಯಲು ಆಗುತ್ತಿರಲಿಲ್ಲ. ಆದರೆ ಬೇರೆ ಯಾರೂ ಹತ್ತಿರವಿರದಿದ್ದಾಗ, ಕೆಲವರ ಮೇಲೆ ವಿಶೇಷ ಕೃಪೆ ಮಾಡಿ, ತಮ್ಮ ನೈಜ ರೂಪವನ್ನು ವ್ಯಕ್ತಪಡಿಸಿದ್ದಾರೆ. ಅವರ ಈ ಬಗೆಯ ವರ್ತನೆಯನ್ನೂ ನಾನು ಗಮನಿಸಿದ್ದೇನೆ. (ಮುಂದುವರಿಯುವುದು)